ಮಕ್ಕಳ ತಂದೆಯಾಗಿರ್ತಾರೆ. ಅದೆಲ್ಲ ಬಿಟ್ಟು ಸುಮ್ನೆ ಬಿ.ಇ. ಓದು. ಕೊನೆ ವರ್ಷದಲ್ಲೇ ಕ್ಯಾಂಪಸ್‌ನಲ್ಲಿ ಒಳ್ಳೆಯ ಕೆಲಸ ಸಿಗತ್ತೆ. ಜೀವನದಲ್ಲಿ ಬೇಗ ಸೆಟ್ಲಾಗ್ಬಿಡ್ತೀಯ..." ಎಂದು ಉಪದೇಶ ಮಾಡಿದ್ದ. ಈ ಹಟಮಾರಿ ತಮ್ಮ ಸುತಾರಾಂ ಕೇಳಿರಲಿಲ್ಲ. "ಕೆಲಸ... ಹುಡುಗಿ ಸಿಗದೇ ಹೋದ್ರೂ ಪರವಾಗಿಲ್ಲ. ನಾನು ಎಂಜಿನಿಯರಿಂಗ್ ಓದಲ್ಲ. ಕಾಮರ್ಸೇ ಮಾಡೋದು" ಎಂದುಬಿಟ್ಟ. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರುವುದನ್ನು ನೋಡಿ ನಾವೇ ಮಧ್ಯೆ ಪ್ರವೇಶಿಸಬೇಕಾಯಿತು. "ಹೋಗ್ಲಿ ಬಿಡೋ... ಹೇಳೋವಷ್ಟು ಹೇಳಾಯ್ತಲ್ಲ, ಇನ್ನು ಅವನಿಷ್ಟ. ಏನಾದ್ರೂ ಮಾಡ್ಕೊಳ್ಳಿ ಬಿಡು" ಎಂದು ಸಮಾಧಾನ ಮಾಡಿದ್ದೆವು. ತನ್ನ ಮಾತಿನಂತೇ ನಡೆದುಕೊಂಡ ಸುಮಂತ ಸಿ.ಎ.ನ ಇಂಟರ್‌ಮೀಡಿಯೇಟ್ ಪರೀಕ್ಷೆ ಪಾಸಾಗಿ ಆರ್ಟಿಕಲ್‌ಶಿಪ್ ಮಾಡ್ತಾ ಇದಾನೆ. ಅವನ ಬಾಸ್ ಪರಿಚಯದವರದ್ದೇ ಈ ಸರ್ವಿಸ್ ಅಪಾರ್ಟ್‌ಮೆಂಟ್. ಆಗಲೇ ಹಳೆಯದಾದ ಲಿಫ್ಟ್ 'ಕಿರ್' ಎಂಬ ಸದ್ದು ಮಾಡುತ್ತ ನಮ್ಮನ್ನು ಎರಡನೇಯ ಅಂತಸ್ತಿನಲ್ಲಿ ಇಳಿಸಿತ್ತು. ಇಪ್ಪತ್ತೈದರ ಹುಡುಗನೊಬ್ಬ ನಮ್ಮನ್ನು ಬರಮಾಡಿಕೊಂಡು "ಬನ್ನಿ, ಸರ್ ಫೋನ್ ಮಾಡಿದ್ದರು" ಎಂದು ರೂಮು ತೋರಿಸಿದ. 'ಪರವಾಗಿಲ್ಲ' ಎನ್ನುವಂತಿದ್ದ ಕೋಣೆ. ಮುಖ್ಯ ಎ.ಸಿ.ಇತ್ತು. ಇಲ್ಲವಾದರೆ ಚೆನ್ನೈನಲ್ಲಿ ಇರುವದೇ ಕಷ್ಟ. ಕಾಫಿ ತರಲು ಹೇಳಿದ ಸುಮಂತ ಎರಡು ನಿಮಿಷ ಹಾಯಾಗಿ ಒರಗಿಕೊಂಡ. ನಾನೂ ಮುಖಮಾರ್ಜನ ಮುಗಿಸಿ ಬಂದು ಕುರ್ಚಿಯಲ್ಲಿ ಕುಳಿತೆ.

ಎದುರಿಗೆ ಶೇಷಶಾಯಿ ಭಂಗಿಯಲ್ಲಿ ಮೈಚೆಲ್ಲಿದ ಮಗನನ್ನು ಕಂಡು ಮುದ್ದು ಉಕ್ಕಿತು. ಜೊತೆಗೆ 'ಅಯ್ಯೋ...' ಎನಿಸಿತು. ಹಾಯಾಗಿ ಓಡಾಡಿಕೊಂಡಿರಬೇಕಾದ ವಯಸ್ಸಿನಲ್ಲೇ ಮುಖದಲ್ಲಿ ಗಾಂಭೀರ್ಯ ಬಂದುಬಿಟ್ಟಿದೆ. ಮನೆಯ ಜವಾಬ್ದಾರಿ ಬಿದ್ದಿದೆ. ವಸಂತ ಇದ್ದಾಗ ಮಕ್ಕಳ ಕೈಲಿ ಒಂದಿನ ದಿನಸಿ ಕೂಡ ತರಿಸಿದವರಲ್ಲ. "ಇದೇ ವಯಸ್ಸು ಕಣೇ. ಹಾಯಾಗಿರ್ಲಿ ಬಿಡು. ನಾವೇ ತಂದ್ರಾಯ್ತು. ಆಮೇಲೆ ಒದ್ದಾಡೋದಿದ್ದೇ ಇದೆ" ಎನ್ನುತ್ತಿದ್ದರು. ಅದಕ್ಕೆ ತಕ್ಕಂತೆ ಮಕ್ಕಳೂ ಉಂಡು ತಿಂದು ಓದಿ ಹಾಯಾಗಿದ್ದರು. ಅನಂತ ಬಿ.ಇ. ಮುಗಿಸಿ ಕ್ಯಾಂಪಸ್‌ನಲ್ಲೇ ಟೆಸ್ಕೋ ಸೇರಿದ. ವಸಂತರಿಗಂತೂ ಕೋಡು ಮೂಡಿದಂತಾಗಿತ್ತು. "ಮಗ ಸಂಪಾದಿಸ್ತಿದಾನೆ. ಕೈಗೆ

